ಡಾ. ಶ್ರೀನಿವಾಸ ರಿತ್ತಿ
ಪ್ರಾಧ್ಯಾಪಕರು, ಪ್ರಾಚೀನ ಭಾರತದ ಚರಿತ್ರೆ
ಮತ್ತು ಶಾಸನ ವಿಜ್ಞಾನ (ನಿವೃತ್ತ)
ಕರ್ನಾಟಕ ಯುನಿವರ್ಸಿಟಿ, ಧಾರವಾಡ.

'ಭಾರತಿ'
ನವೋದಯನಗರ,
ಧಾರವಾಡ – ೫೮೦ ೦೦೩
ಫೋ–೦೮೩೬–೨೪೪೭೧೩೨

## ಶುಭಾಶಂಸನ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕಾರ್ಯಚಟುವಟಿಕೆಗಳನ್ನು ಪ್ರಚುರಪಡಿಸುವ ತ್ರೈಮಾಸಿಕ ವಾರ್ತಾಪತ್ರವನ್ನು ನೀವು ಪ್ರಕಟಿಸುತ್ತಿರುವದು ಶ್ಲಾಘನೀಯ. ಸಂಸ್ಕೃತದ ಬಗ್ಗೆ, ತನ್ಮೂಲಕ ಇತ್ತೀಚೆಗೆ ಆರಂಭವಾಗಿರುವ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಬಗ್ಗೆ ಆಸ್ಥೆಯುಳ್ಳವರಿಗೆ ಇಂಥ ಚಟುವಟಿಕೆಗಳ ಬಗ್ಗೆ ತಿಳಿದುಕೊಳ್ಳುವ ಕುತೂಹಲವಿರುತ್ತದೆ. ಅಂಥವರಿಗೆ ಈ ವಾರ್ತಾಪತ್ರವು ಉತ್ತಮ ಮಾಹಿತಿಯನ್ನೊದಗಿಸಿ ಮುದಗೊಳಿಸುತ್ತದೆ. ಈ ಸ್ತುತ್ಯ ಉಪಕ್ರಮವನ್ನು ಕೈಕೊಂಡದ್ದಕ್ಕಾಗಿ ಹಾರ್ದಿಕ ಅಭಿನಂದನೆಗಳು, ಶುಭಾಶಯಗಳು.

ನಾನು ಇತ್ತೀಚೆಗಷ್ಟೇ ಈ ವಾರ್ತಾಪತ್ರದ ಸಂಚಿಕೆಯೊಂದನ್ನು ನೋಡಿದೆ. ಅದು ಒಂದು ಅವಧಿಯಲ್ಲಿ ವಿಶ್ವವಿದ್ಯಾಲಯದ ಮೂಲಕ ನಡೆದ ಅನೇಕ ಕಾರ್ಯಕ್ರಮಗಳನ್ನು ಕುರಿತು ವಿಪುಲವಾದ ಮಾಹಿತಿಯನ್ನು ಕೊಡುತ್ತದೆ. ಸಂಸ್ಕೃತದ ಅಭ್ಯಾಸವು ಒಂದು ರೀತಿಯಿಂದ ಹಿನ್ನಡೆಯನ್ನು ಅನುಭವಿಸುತ್ತಿರುವ ಇಂದಿನ ದಿನಗಳಲ್ಲಿ ಇಂಥ ಉತ್ಸಾಹದಾಯಕ ಚಟುವಟಿಕೆಗಳನ್ನು ತಿಳಿದು ಸಂತೋಷವಾಗುತ್ತದೆ. ಸಂಸ್ಕೃತ ವಿಶ್ವವಿದ್ಯಾಲಯ ಬರಿ ಶಿಕ್ಷಣಕ್ಕಷ್ಟೇ ಸೀಮಿತವಾಗದೆ ಸಂಸ್ಕೃತ ಪ್ರಚಾರಕ್ಕೆ ಸಂಬಂಧಿಸಿದಂತೆ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿರುವುದು ಸ್ವಾಗತಾರ್ಹ. ಸಂಸ್ಕೃತ ಸಂಧ್ಯಾಮಹಾವಿದ್ಯಾಲಯದ ಸ್ಥಾಪನೆಯು ಇಂಥ ಒಂದು ದಿಟ್ಟ ಹೆಜ್ಜೆ. ಸಂಸ್ಕೃತದಲ್ಲಿ ಆಸ್ಥೆಯುಳ್ಳ ಯಾರಾದರೂ ವಯಸ್ಸಿನ ನಿರ್ಬಂಧವಿಲ್ಲದೆ ಸಂಸ್ಕೃತವನ್ನು ಕಲಿಯಲಪೇಕ್ಷಿಸುವವರಿಗೆ ಇದು ಒಂದು ವರದಾನ. ಹಾಗೆಯೇ ಪುಸ್ತಕ ಪ್ರಕಟನೆಗಳು, ವೈಚಾರಿಕತೆಯಿಂದ ಕೂಡಿದ ವಿಶೇಷ ಉಪನ್ಯಾಸಗಳು, ವಿಚಾರ ಸಂಕಿರಣಗಳು ಇವೆಲ್ಲ ಸಂಸ್ಕೃತದ ಪ್ರಚಾರಕ್ಕೆ, ಪ್ರಸಾರಕ್ಕೆ ಅತ್ಯುತ್ತಮ ಸಾಧನಗಳಾಗಿವೆ. ಇಂಥ ಬಹು ಅಪೇಕ್ಷಿತವಾದ ಕಾರ್ಯಕ್ರಮಗಳನ್ನು ಹಾಕಿಕೊಂಡುದಕ್ಕೆ ವಿಶ್ವವಿದ್ಯಾಲಯದ ಎಲ್ಲ ಪದಾಧಿಕಾರಿಗಳನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಸಂಸ್ಕೃತ ವಿಶ್ವವಿದ್ಯಾಲಯವು ಹಾಕಿಕೊಂಡ ಕಾರ್ಯಕ್ರಮಗಳ ಹರವನ್ನು ಕಂಡು ನನಗಂತೂ ಹೆಚ್ಚಿನ ಸಂತೋಷವಾಗಿದೆ. ವಿಶ್ವವಿದ್ಯಾಲಯವು ಇನ್ನೂ ಹೆಚ್ಚು ಹೆಚ್ಚು ಕಾರ್ಯಕ್ರಮವನ್ನು ರೂಪಿಸಿಕೊಂಡು ಸಂಸ್ಕೃತ ಭಾಷೆಯು ಮತ್ತೆ ಪರಮೋಚ್ಚ ಸ್ಥಾನವನ್ನು ಪಡೆಯುವಂತಾಗಲಿ ಎಂದು ಹಾರೈಸುತ್ತೇನೆ. ವಿಶ್ವವಿದ್ಯಾಲಯದ ವಾರ್ತಾಪತ್ರಕ್ಕೆ ಶುಭ ಕೋರುತ್ತೇನೆ.

ಶ್ರೀನಿವಾಸ ರಿತ್ತಿ